ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಸಾಲದ ಅರ್ಜಿಗಳ ಮೇರೆ ಸಾಲಕೊಡುವುದು ಅಮಲ್ದಾರರ ಮರ್ಜಿಯ ಮೇರೆಯೇ ಅಥವಾ ಅದರ ಬಗ್ಗೆ ನಿಯಮ ನಿಬಂಧನೆಗಳಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆರ್ಯಾ ಕ್ರಮ ಮತ್ತು ರೂಲ್ಸ್ ಇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—41 ಕೇಸುಗಳಲ್ಲಿ ಸಾಲಕೊಟ್ಟಿದೆಯೆಂದು ಹೇಳಿದ್ದೀರಿ. ಒಟ್ಟು ಎಷ್ಟು ಹಣ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಾವಿಗಳನ್ನು ಹೆಚ್ಚಿಗೆ ಆಳವಾಡಿ ನೀರು ಒದಗಿಸಿದರೆ, ಅಲ್ಲಿ ಮಳೆಗಾಲದಲ್ಲಿ ನೀರು ತುಬಕೊಂಡರೂ ಬೇಸಿಗೆಯಲ್ಲಿ ನೀರಿರದೆ ಬತ್ತಿಹೋಗುತ್ತದೆಯೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿಯೇ ಆಳ ಮಾಡುವುದು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ನೀವು ಈಗ ಮಾಡುತ್ತಿರುವಂತೆ ಮಾಡಿದರೆ, ಎಷ್ಟು ವರ್ಷಗಳಲ್ಲಿ ಈ ಸಮಸ್ಯೆಯನ್ನು ಪೂರೈಸುತ್ತೀರಿ ? ಪ್ರತಿವರ್ಷವೂ ಹೀಗೆ ಒಂದು-ಎರಡು ಮಾಡುತ್ತಿದ್ದರೆ ಎಂದಿಗೆ ಮುಗಿಯುತ್ತದೆ ! ಒಟ್ಟಿಗೆ ಎಲ್ಲ ಕಡೆಯೂ ನೀರೊದಗಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಏನೇ ಮಾಡಿದರೂ ಮಳೆ ಆಗಾಗ್ಗೆ ಸರಿಯಾಗಿ ಆಗುತ್ತಿದ್ದರೆ water level ಇರುತ್ತದೆ. ಈ ವರ್ಷ ಮಳೆ ಚೆನ್ನಾಗಿದೆ. ಈ ವರ್ಷ ತೊಂದರೆಯಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಲ್ಲಿ ಕಂದಾಯದ ರಿಯಾಯಿತಿ ಮಾಡುವುದಕ್ಕೇನಾದರೂ ಅವಕಾಶ ಮಾಡಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಯಾಂಕ್ಷನ್ ಮಾಡಿದೆ.

Major and Minor Tanks in the State.

Q.—316. Sri G. BASAPPA (Hosadurga).—

Will the Government be pleased to state :—

(*a*) the number of major and minor tanks in the State ;

(*b*) the amount of irrigation cess collected every year under these tanks ;

(*c*) the amount of Government grant allotted every year for the last five years for the improvement of these tanks ;

(*d*) whether the raiyats are doing annual repairs to the tanks controlled by Revenue Department ?

A.—Sri KADIDAL MANJAPPA (Minister for Revenue and Public Works).—

(*a*) Major—2,596.
Minor—19,982.

(*b*) Rs. 2,55,481.

(*c*) A grant of Rs. 3.00 lakhs is being made available to the Irrigation Cess Fund Budget each year.

(*d*) Maintenance work by ryots is generally neglected and not attended to regularly every year.

ಶ್ರೀ ಜಿ. ಬಸಪ್ಪ.—(*d*) ಪ್ರಶ್ನೆಗೆ ಉತ್ತರವಾಗಿ, ರೈತರು ಯಾರೂ ಕೆರೆ ರಿಪೇರಿ ಕಾಮಗಾರಿ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದ್ದೀರಿ. ಅಂದಮೇಲೆ ಕೆರೆಗಳ ರಿಪೇರಿ ಮತ್ತು maintenance ಕೆಲಸವನ್ನು ಈಗ ಯಾರು ಮಾಡುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ವಾಹವಿಲ್ಲದೆ ಸರ್ಕಾರದವರು ಮಾಡುತ್ತಿದ್ದಾರೆ.

ಶ್ರೀ ಜಿ. ಬಸಪ್ಪ.—ಹೀಗೆ ಮಾಡಿದ ಸಂದರ್ಭದಲ್ಲಿ ಅವರಿಂದೇನಾದರೂ ಕಾಂಟ್ರಿಬ್ಯೂಷನ್ ವಸೂಲು ಮಾಡುತ್ತಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ವಸೂಲು ಮಾಡುತ್ತಿದ್ದೇವೆ.

ಶ್ರೀ ಜಿ. ಬಸಪ್ಪ.—ಅಂದರೆ ಅವರು ಇದಕ್ಕಾಗಿ ಏನಾದರೂ ಹೆಚ್ಚಿಗೆ ಹಣವನ್ನು ಕಂದಾಯದ ರೂಪದಲ್ಲಿ ಕೊಡುವಂತೆ ಮಾಡಿ ವಸೂಲು ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಏಕರೇಜ್ ಸೆಸ್ ವಸೂಲು ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಈ 19,982 ಮೈನರ್ ಕೆರೆಗಳೂ ಉಪಯೋಗದಲ್ಲಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಇವೆ ಕೆಲವು ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಎಷ್ಟು ಉಪಯೋಗದಲ್ಲಿಲ್ಲ ?

Mr. SPEAKER.—It is too big a question.

ಶ್ರೀ ಬಿ. ಹುಚ್ಚೇಗೌಡ.—19,982 ಮೈನರ್ ಕೆರೆಗಳಿವೆಯೆಂದು ಹೇಳಿದ್ದೀರಿ; ಇವುಗಳಲ್ಲಿ ಎಷ್ಟು ಉಪಯೋಗದಲ್ಲಿವೆಯೆಂದು ನಾನು ಕೇಳುತ್ತಿದ್ದೇನೆ.

Mr. SPEAKER.—How can that be given? That requires time.

ಶ್ರೀ ಬಿ. ಹುಚ್ಚೇಗೌಡ.—Maintenance work ರೈತರು ಮಾಡುತ್ತಿಲ್ಲವೆಂದು ಹೇಳಿದಿರಿ, ರೈತರು ಇದನ್ನು ಕೈಬಿಡುವುದಕ್ಕೆ ಕಾರಣ, ನೀವು ಆ ಕೆರೆಗಳ ಮೀನನ್ನು ಹರಾಜು ಮಾಡುತ್ತಿರುವುದೇ ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಒಂದೇ ಕಾರಣವಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನಿಂದಲೂ ರೈತರು ಈ ಕೆರೆಗಳಲ್ಲಿ ಮೀನು ತೆಗೆದುಕೊಂಡು ಮುಟ್ಟಿ ಕಾಮಗಾರಿ ಮಾಡುತ್ತಿದ್ದರು, ಈಗ ಮೀನು ಹಿಡಿಯುವುದನ್ನು ನೀವು ತಪ್ಪಿಸಿದ್ದರಿಂದ ಈ ಕೆಲಸವನ್ನು ಕೈ ಬಿಟ್ಟಿದ್ದಾರೆ.

Sri K. HANUMANTHAIYA.—I accept the suggestion of the Hon'ble Member. In fact, instructions have been given that in respect of minor tanks the fishing rights might be handed over to the villagers as was the practice previously, and the Fishing Department might confine their activities to major tanks.